Land Less and Siteless persons in Channapatna Town

79 SRI D. T. RAMU (Channapatna) Will the Minister for Housing and Urban Development be pleased to state :—

(a) the number of persons who are landless and siteless in Channapatna Town, Channapatna Taluk ;

(b) out of them the number persons belonging to Scheduled Castes, Scheduled Tribes and Civic employees ;

(c) whether the Government have proposed to take immediate action to provide sites ?

SRI DHARAM SINGH (Minister for Housing and Urban Development).—

(a) 3,600

(b)

Scheduled Castes	602
Scheduled Tribes	153
Civic Employees	50

(c) It has been proposed to allot sites by acquiring lands in Survey Nos. 71, 72, 73 & 74 of Thattekere Village. The sites could be formed if Kunnir causeway which is adjacent to this land is demolished. A letter has also been addressed in this behalf to the Executive Engineer, Public Works Department, Ramanagaram Division.

ಶ್ರೀ ಡಿ.ಟಿ. ರಾಮು.—ನನ್ನ ಪ್ರಶ್ನೆ (ಆ) ಗೆ ಉತ್ತರವಾಗಿ ೩,೬೦೦ ಜನರಿದ್ದಾರೆಂದು ಹೇಳಿದ್ದೀರಿ ಆದರೆ ನನಗೆ ತಿಳಿದು ಬಂದ ಮಾಹಿತ ಪ್ರಕಾರ ಸುಮಾರು ೬೦೦೦ಕ್ಕೂ ಮೇಲ್ಪಟ್ಟು ನಿವೇಶನ ರಹಿತ ಜನರಿದ್ದಾರೆ ಎಂದು ತಿಳಿದು ಬಂದಿದೆ. ಆದಂದರಿಂದ ಕಾವು ಒದಗಿಸಿರತಕ್ಕಂಥ ಅಂಕೆ ತಪ್ಪು ಎಂದು ಅನ್ನಿಸುತ್ತಿದೆ. ಇನ್ನೊಂದು ಶಂಕೆ ನವಾಗೆ ಏನು ಬರುತ್ತಿದೆ ಎಂದರೆ ಭೂಮಿ ಇದ್ದವರಿಗೂ ಸಹ ನಿವೇಶನಗಳನ್ನು ಒದಗಿಸಿದ್ದೀರಿ ಎನ್ನುವ ಅನುಮಾನ ಬಂದಿದೆ ಆದುದರಿಂದ ಇದರ ಬಗ್ಗೆ ಮಾನ. ಮಂತ್ರಿಗಳವರು ಉತ್ತರ ನೀಡಬೇಕು.

ಶ್ರೀ ಧರ್ಮಸಿಂಗ್.— ಮಾನ್ಯ ಸಭಾಧ್ಯಕ್ಷರೇ, ನಮಗೆ ಇಲ್ಲಿ ಮಾಹಿತಿ ಬಂದಿರುವ ಪ್ರಕಾರ ೩,೬೦೦ ಜನರೆಂದು ಇದೆ ಮತ್ತೆ ಲೇಟೆಸ್ಟ್ ಆಗಿ ಇನ್ನೂ ನಿವೇಶನ ರಹಿತ ಜನ ಎಷ್ಟಿದ್ದಾರೆ ಎನ್ನುವ ಬಗ್ಗೆ ಐಟೆಂಟಿಫೈ ಮಾಡುವ ಬಗ್ಗೆ ತಿಳಿಸಿದ್ದೇವೆ. ಈಗ ಸರ್ವೆ ನಂಬರ್ ೭೧, ೭೨, ೭೩ ಮತ್ತು ೭೪ರಲ್ಲಿ ಜಮೀನನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿ ಸೈಟ್‌ಗಳನ್ನು ಕೊಡಬೇಕೆಂದು ಉದ್ದೇಶ ಮಾಡಿಕೊಂಡಿದ್ದೇವೆ. ಆದರೆ ಅದರ ಪಕ್ಕದಲ್ಲಿರುವ ಕೆರೆ ಒಡೆದರೆ ಆದರಿಂದ ತೊಂದರೆಯಾಗಬಹುದು ಎನ್ನತಕ್ಕ ಅಭಿಪ್ರಾಯವಿತ್ತು. ಆದರೆ ಜಿಲ್ಲಾಧಿಕಾರಿಗಳವರ ಅಭಿಪ್ರಾಯದ ಮೇರೆಗೆ ಅಲ್ಲಿ ಅಷ್ಟು ನೀರು ನಿಲ್ಲುತ್ತಾ ಇಲ್ಲ ಎನ್ನುವುದು ಗೊತ್ತಾದ ಮೇಲೆ ಆ ಜಮೀನನ್ನು ವಶಪಡಿಸಿಕೊಂಡು ಐ. ಯು. ಡಿ. ಪಿ. ಸ್ಕೀಂನ ಪ್ರಕಾರ ಆ ಲ್ಯಾಂಡ್‌ನ್ನು ಅಕ್ವೈರ್ ಮಾಡಿಕೊಂಡು ಸೈಟ್ ಇಲ್ಲದವರಿಗೆ ಕೊಡಬೇಕು ಎನ್ನತಕ್ಕ ಯೋಚನೆ ಮಾಡುತ್ತಿದ್ದೇವೆ.

ಶ್ರೀ ಡಿ.ಟಿ. ರಾಮು.— ಕುನ್ನೀರು ಕಟ್ಟೆಯನ್ನು ಒಡೆದು ಆ ಪ್ರದೇಶವನ್ನು ನಿವೇಶನಗಳನ್ನಾಗಿ ವಿಂಗಡಿಸಬೇಕೆಂಬ ಯೋಜನೆ ಸರ್ಕಾರದಲ್ಲಿದೆ ಎಂಬ ವಿಚಾರವನ್ನು ಮಾನ್ಯ ಸಚಿವರು ಹೇಳುತ್ತಿದ್ದಾರೆ,

ಕುನ್ನೀರು ಕಟ್ಟೆ ಚನ್ನಪಟ್ಟಣದ ಒಂದು ಜೀವನಾಡಿ. ಬಹುತೇಕ ಜನರು ಆ ಕಟ್ಟೆಯನ್ನು ಅವಲಂಬಿಸಿರುವುದರಿಂದ ಅದನ್ನು ಒಡೆದರೆ ಉಗ್ರ ಪ್ರತಿಭಟನೆ ಬರುತ್ತದೆ. ಜೊತೆಗೆ ಅದು ಸಾಧುವಲ್ಲವೆಂದು ನನ್ನ ಭಾವನೆ. ಆದ್ದರಿಂದ ಅದನ್ನು ಬಿಟ್ಟು ಸಿಲ್ಕ್ ಫಾರಂ ಕಡೆ ಇರತಕ್ಕ ಪ್ರದೇಶವನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿ ಸೈಟುಗಳನ್ನು ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.— ತಮ್ಮ ಅಭಿಪ್ರಾಯದ ಪ್ರಕಾರ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಅದಕ್ಕೆ ತಡೆಯಾಜ್ಞೆ ನೀಡಿದ್ದಾರೆ. ಸಿಲ್ಕ್ ಫಾರಂ ಕಡೆ ಇರತಕ್ಕ ಸ್ಥಳವನ್ನು ಸ್ವಾಧೀನಪಡಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿದ್ದೇವೆ.

Second stage of Milk producing Scheme

3181 SRI M. S. ATMANANDA (Mandya) Will the Minister for law and Parlimentary Affairs and Veterinary and Animal Husbandry be pleased to state :—

(a) whether the second stage of more milk produce scheme has come into force ;

(b) if it is not so, the action proposed to be taken by Government to give effect immediately ?

SRI Y. RAMAKRISHNA (Minister for Law and Parliamentary Affairs and Veterinary and Animal Husbandry).—

(a) No

(b) The matter is under active consideration of Government.

ಶ್ರೀ ಎಂ. ಎಸ್. ಆತ್ಮಾನಂದ.— ತಮ್ಮ ಉತ್ತರದಲ್ಲಿ ಅಧಿಕ ಕ್ಷೀರೋತ್ಪಾದನಾ ಯೋಜನೆಯ ೨ನೇ ಹಂತ ಇನ್ನೂ ಅನುಷ್ಠಾನಕ್ಕೆ ಬಂದಿಲ್ಲವೆಂದೂ ಮತ್ತು ಅದು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದು ರೈತರಿಗೆ ಬಹಳ ಅಮೂಲ್ಯವಾದ ಯೋಜನೆಯಾಗಿರುತ್ತದೆ ಈ ಯೋಜನೆಯನ್ನು ಎಷ್ಟು ಕಾಲದಲ್ಲಿ ಸರ್ಕಾರ ಅನುಷ್ಠಾನಕ್ಕೆ ತರಲು ಪ್ರಯತ್ನ ಮಾಡುತ್ತದೆ ಹಾಗೂ ಈ ಯೋಜನೆಯ ಅನ್ವಯ ಎಷ್ಟು ಜಿಲ್ಲೆಗಳಿಗೆ ಆಗುತ್ತದೆ ?

ಶ್ರೀ ವೈ. ರಾಮಕೃಷ್ಣ.—ಕೆ. ಡಿ. ಡಿ. ಸಿ. ವಿಧಿಯ ಎಂದು ೬ ಜಿಲ್ಲೆಗಳು ಏನಿವೆ ಅವುಗಳನ್ನು ಬಿಟ್ಟು ಉಳಿದ ಎಲ್ಲ ಜಿಲ್ಲೆಗಳು ಈ ಒಂದು ಯೋಜನೆಯ ವ್ಯಾಪ್ತಿಗೆ ಬರುತ್ತವೆ. ಎರಡನೆಯದಾಗಿ, ಈ ವಿಚಾರದ ಬಗ್ಗೆ ಇಂಡಿಯನ್ ಡೈರಿ ಡೆವಲಪ್‌ಮೆಂಟ್ ಕಾರ್ಪೊರೇಷನ್‌ನೊಡನೆ ವ್ಯವಹರಿಸುತ್ತಿದ್ದೇವೆ ಅದು ಪೂರ್ಣವಾದ ಮೇಲೆ ಅತಿ ಶೀಘ್ರವಾಗಿ ಕೆಲಸ ಪ್ರಾರಂಭಿಸುತ್ತೇವೆ.

ಶ್ರೀ ಕೆ. ಎಚ್. ಹನುಮೇಗೌಡ.— ಇದು ಸುಮಾರು ೬೦ ಕೋಟಿ ರೂಪಾಯಿಗಳ ಯೋಜನೆ. ಇದಕ್ಕೆ ರಾಜ್ಯ ಸರ್ಕಾರದವರು ಒಪ್ಪಿದರೆ ೨೦ ಕೋಟಿ ರೂಪಾಯಿಗಳ ಧನ ಸಹಾಯ ನ್ಯಾಷನಲ್ ಡೇರಿ ಡೆವಲಪ್‌ಮೆಂಟ್ ಬೋರ್ಡ್‌ನಿಂದ ಬರುತ್ತದೆ. ಈ ಬಗ್ಗೆ ನ್ಯಾಷನಲ್ ಡೇರಿ ಡೆವಲಪ್‌ಮೆಂಟ್ ಬೋರ್ಡ್ ಸರ್ಕಾರಕ್ಕೆ ಕಳೆದ ೩ ವರ್ಷಗಳಿಂದ ಒತ್ತಡ ಹಾಕುತ್ತಿದೆ. ಕೇರಳ, ತಮಿಳ್ನಾಡು, ಮಹಾರಾಷ್ಟ್ರ ಹಾಗೂ ಆಂಧ್ರಪ್ರದೇಶದ ಸರ್ಕಾರಗಳು ೪ ವರ್ಷಗಳ ಹಿಂದೆಯೇ ಒಪ್ಪಿಕೊಂಡು ಈ ಯೋಜನೆಯನ್ನು ಜಾರಿಗೆ ತಂದಿರುವಾಗ ಕರ್ನಾಟಕ ರಾಜ್ಯದವರು ಇದುವರೆಗೆ ಈ ಯೋಜನೆಯನ್ನು ಒಪ್ಪಿಕೊಳ್ಳದೆ ಇರುವುದಕ್ಕೆ ಕಾರಣವೇನು ?

ಶ್ರೀ ವೈ. ರಾಮಕೃಷ್ಣ.— ಇದರ ಬಗ್ಗೆ ಕೇಂದ್ರದೊಡನೆ ಮಾತುಕತೆ ನಡೆಸುತ್ತಿದ್ದೇವೆ ಎಂದು ನಾನು ಆಗಲೇ ತಿಳಿಸಿದ್ದೇನೆ.

ಅಧ್ಯಕ್ಷರು.—೩ ವರ್ಷವಾಯಿತು. ೨೦ ಕೋಟಿ ರೂಪಾಯಿ ಲ್ಯಾಪ್ಸ್ ಆಗುತ್ತಿದೆ ಅನ್ನುತ್ತಾರೆ.